# 2001ರ ಕರ್ನಾಟಕ ಅಧಿನಿಯಮ ಸಂಖ್ಯೆ: 25

# ಕರ್ನಾಟಕ ತುಂಗಭದ್ರ ಸಕ್ಕರೆ (ದೇವಿ ಸಕ್ಕರೆ) ನಿಯಮಿತ (ಉದ್ಯಮದ ಆರ್ಜನೆ ಮತ್ತು ವರ್ಗಾವಣೆ) (ನಿರಸನ) ಅಧಿನಿಯಮ 2001

## ಪ್ರಕರಣಗಳ ಪಟ್ಟಿ

**ಪ್ರಕರಣಗಳು:**

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ

2. 1999ರ ಕರ್ನಾಟಕ ಅಧಿನಿಯಮ 1ರ ನಿರಸನ

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

## (ವಿಧೇಯಕವನ್ನು ಮಂಡಿಸುವಾಗ ಲಗತ್ತಿಸಿದಂತೆ)

ಕರ್ನಾಟಕ ರಾಜ್ಯಪಾಲರು, ಸಾರ್ವಜನಿಕ ಹಿತದೃಷ್ಟಿಯಿಂದ, ತುಂಗಭದ್ರ ಸಕ್ಕರೆ (ದೇವಿ ಸಕ್ಕರೆ) ನಿಯಮಿತ, ಶಿವಮೊಗ್ಗ - ಈ ಉದ್ಯಮವನ್ನು ಆರ್ಜಿಸಲು ಮತ್ತು ವರ್ಗಾವಣೆ ಮಾಡಲು, ತುಂಗಭದ್ರ ಸಕ್ಕರೆ (ದೇವಿ ಸಕ್ಕರೆ) ನಿಯಮಿತ (ಉದ್ಯಮದ ಆರ್ಜನೆ ಮತ್ತು ವರ್ಗಾವಣೆ) ಅಧ್ಯಾದೇಶ, 1998ನ್ನು ಪ್ರಖ್ಯಾಪಿಸಿದರು. ಮುಂದೆ ಇದರ ಬದಲಿಗೆ ತುಂಗಭದ್ರ ಸಕ್ಕರೆ (ದೇವಿ ಸಕ್ಕರೆ) ನಿಯಮಿತ (ಉದ್ಯಮದ ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1998ನ್ನು (1999ರ ಕರ್ನಾಟಕ ಅಧಿನಿಯಮ 1) ಮಂಡಿಸಲಾಯಿತು. ಈವರೆಗೂ ಪ್ರಾರಂಭ ದಿನವನ್ನು ಗೊತ್ತುಪಡಿಸದ ಕಾರಣ ಸದರಿ ಅಧ್ಯಾದೇಶದ ಉಪಬಂಧಗಳನ್ನಾಗಲಿ, ಅಧಿನಿಯಮದ ಉಪಬಂಧಗಳನ್ನಾಗಲೀ ಜಾರಿಗೊಳಿಸಲಾಗಲಿಲ್ಲ.

ಇಷ್ಟರಲ್ಲಿ ಸರ್ಕಾರವು ಆಸ್ತಿಗಳು ಮತ್ತು ಹೊಣೆಗಾರಿಕೆಗಳ ಪಟ್ಟಿಯನ್ನು ತಯಾರಿಸಲು ಮತ್ತು ಸದರಿ ಕಂಪನಿಯ ನಿವ್ವಳ ಮೌಲ್ಯವನ್ನು ನಿರ್ಧರಿಸಲು ಕೆಎಸ್ಐಐಡಿಸಿ ಯನ್ನು ಏಜೆನ್ಸಿಯಾಗಿ ಹೆಸರಿಸಿತು. ಮುಂದೆ ಕೆಎಸ್ಐಐಡಿಸಿ ಯು ಈ ಉದ್ದೇಶಕ್ಕಾಗಿ ಟೆಕ್‌ಸಾಕ್‌ನ್ನು ತೊಡಗಿಸಿತು.

ಟೆಕ್‌ಸಾಕ್ ಮಾಡಿದ ಮೌಲ್ಯ ನಿರ್ಧರಣೆಯ ಪ್ರಕಾರ ಕಂಪನಿಯು ರೂ. 2,945.92 ಲಕ್ಷಗಳವರೆಗಿನ ಆಸ್ತಿಗಳನ್ನು ಮತ್ತು ರೂ. 5272.50 ಲಕ್ಷಗಳವರೆಗಿನ ಹೊಣೆಗಾರಿಕೆಗಳನ್ನು ಹೊಂದಿರುತ್ತದೆ. ಎಂದರೆ, ಸದರಿ ಕಂಪನಿಯ ಆಸ್ತಿಗಳು ಮತ್ತು ಹೊಣೆಗಾರಿಕೆಗಳ ನಡುವೆ ರೂ. 2,326.58 ಲಕ್ಷಗಳ ಅಗಾಧ ಅಂತರವಿರುವುದು ಕಂಡುಬರುತ್ತದೆ.

ಕಂಪನಿಯ ಆಸ್ತಿಗಳು ಮತ್ತು ಹೊಣೆಗಳ ನಡುವೆ ಇರುವ ಈ ಅಗಾಧ ಪ್ರಮಾಣದ ಅಂತರವನ್ನು ದೃಷ್ಟಿಯಲ್ಲಿಟ್ಟುಕೊಂಡು, ಈ ಘಟಕದ ಆರ್ಜನೆ ಮತ್ತು ವರ್ಗಾವಣೆಯ ಕ್ರಮವು

ಹೆಚ್ಚಿನ ಲಾಭದಾಯಕವಾದ ಕ್ರಮವಲ್ಲವೆಂದೂ, ಈ ಘಟಕವನ್ನೂ ನಡೆಸಿಕೊಂಡು ಹೋಗುವಲ್ಲಿ ಸರ್ಕಾರವು ಅತಿ ಹೆಚ್ಚಿನ ಜವಾಬ್ದಾರಿಯನ್ನು ಹೊರಬೇಕಾಗುತ್ತದೆಂದೂ ಕಂಡುಬಂತು. ರೋಗಗ್ರಸ್ತ ಘಟಕವನ್ನು ಆರ್ಜನೆ ಮಾಡಿಕೊಳ್ಳುವ ಇಂಥ ಒಂದು ಪದ್ಧತಿಯು ಮುಂದೆ ಇಂತಹವೇ ರೋಗಗ್ರಸ್ತ ಘಟಕಗಳನ್ನು ಸರ್ಕಾರವು ಆರ್ಜನೆ ಮಾಡಬೇಕಾದಂಥ ಒತ್ತಡದ ಪರಿಸ್ಥಿತಿಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ. ಆದ್ದರಿಂದ, ತುಂಗಭದ್ರ ಸಕ್ಕರೆ (ದೇವಿ ಸಕ್ಕರೆ) ನಿಯಮಿತ (ಉದ್ಯಮದ ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1998ನ್ನು (1999ರ ಕರ್ನಾಟಕ ಅಧಿನಿಯಮ 1) ನಿರಸನಗೊಳಿಸುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(2001ರ ವಿಧಾನ ಸಭೆಯ ವಿಧೇಯಕ ಸಂಖ್ಯೆ:18 ಕಡತ ಸಂಖ್ಯೆ: ಸಂವ್ಯಶಾಇ 18 ಶಾಸನ 2001)

## 2001ರ ಕರ್ನಾಟಕ ಅಧಿನಿಯಮ ಸಂಖ್ಯೆ: 25

*(2001ರ ಆಗಸ್ಟ್ ಮೂವತ್ತನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)*

# ತುಂಗಭದ್ರ ಸಕ್ಕರೆ (ದೇವಿ ಸಕ್ಕರೆ) ನಿಯಮಿತ (ಉದ್ಯಮದ ಆರ್ಜನೆ ಮತ್ತು ವರ್ಗಾವಣೆ) (ನಿರಸನ) ಅಧಿನಿಯಮ, 2001

*( 2001ರ ಆಗಸ್ಟ್ ಇಪ್ಪತ್ತೊಂಭತ್ತನೇ ದಿನಾಂಕದಂದು ಕರ್ನಾಟಕ ರಾಜ್ಯಪಾಲರ ಅನುಮತಿಯನ್ನು ಪಡೆಯಲಾಗಿದೆ)*

ತುಂಗಭದ್ರ ಸಕ್ಕರೆ (ದೇವಿ ಸಕ್ಕರೆ) ನಿಯಮಿತ (ಉದ್ಯಮದ ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1998ನ್ನು ನಿರಸನಗೊಳಿಸಲು ಒಂದು ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಕ್ಕಾಗಿ ತುಂಗಭದ್ರ ಸಕ್ಕರೆ (ದೇವಿ ಸಕ್ಕರೆ) ನಿಯಮಿತ (ಉದ್ಯಮದ ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1998ನ್ನು (1999ರ ಕರ್ನಾಟಕ ಅಧಿನಿಯಮ 1) ನಿರಸನಗೊಳಿಸುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಐವತ್ತೆರಡನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ :-** (1) ಈ ಅಧಿನಿಯಮವನ್ನು ತುಂಗಭದ್ರ ಸ್ಕರೆ (ದೇವಿ ಸಕ್ಕರೆ) ನಿಯಮಿತ (ಉದ್ಯಮದ ಆರ್ಜನೆ ಮತ್ತು ವರ್ಗಾವಣೆ) (ನಿರಸನ) ಅಧಿನಿಯಮ, 2001 ಎಂದು ಕರೆಯತಕ್ಕದ್ದು.

(2) ಇದು, ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. 1999ರ ಕರ್ನಾಟಕ ಅಧಿನಿಯಮ 1ರ ನಿರಸನ :-** (1) ತುಂಗಭದ್ರ ಸಕ್ಕರೆ (ದೇವಿ ಸಕ್ಕರೆ) ನಿಯಮಿತ (ಉದ್ಯಮದ ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1998ನ್ನು (1999ರ ಕರ್ನಾಟಕ ಅಧಿನಿಯಮ 1)ಈ ಮೂಲಕ ನಿರಸನಗೊಳಿಸಲಾಗಿದೆ.

---

(ಕರ್ನಾಟಕ ರಾಜ್ಯ ಪತ್ರದ ಭಾಗ-IVಎ ವಿಶೇಷ ಪತ್ರಿಕೆ ಸಂಖ್ಯೆ:1617 ದಿನಾಂಕ 30.8.2001 ರಲ್ಲಿ ಪ್ರಕಟಿತ ಕಡತ ಸಂಖ್ಯೆ: ಸಂವ್ಯಶಾಇ 18 ಶಾಸನ 2001)